**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.787/2019**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ವಿರೇಶ | ಸಿ.ಡಬ್ಲ್ಯೂ-03 |
| ತಂದೆಯ ಹೆಸರು | : | ವೀರಣ್ಣ | ಪಿ.ಡಬ್ಲ್ಯೂ-01 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಚಳ್ಳಕೆರೆ | ದಿಃ 05-03-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು. ಈಗ್ಗೆ 5-6 ವರ್ಷಗಳ ಹಿಂದೆ ಚಳ್ಳಕೆರೆ ಪೊಲೀಸ್ ಠಾಣೆಯ ಹತ್ತಿರ ನಿಪಿ.1 ಕ್ಕೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಜರುಗಿಸಿರುವುದಿಲ್ಲ. ಪೊಲೀಸರು ನಮ್ಮನ್ನು ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ. ಯಾವುದೇ ವ್ಯಕ್ತಿಯನ್ನು ತಡೆದು ನಿಲ್ಲಿಸಿರುವುದಿಲ್ಲ. ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ನಿಪಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 05.04.2019 ರಂದು ಸಂಜೆ 06-00 ಗಂಟೆ ಸಮಯದಲ್ಲಿ ಚಾಸಾ-1 ರವರು ನನ್ನನ್ನು ಮತ್ತು ಚಾಚಾ-2 ರವರನ್ನು ಬರಮಾಡಿಕೊಂಡು ಪಂಚರಾಗಿ ಸಹಕರಿಸಲು ಕೋರಿದ್ದರು ಎಂದರೆ ಸರಿಯಲ್ಲ. ನಾವು ಒಪ್ಪಿದ ಮೇರೆಗೆ ನನ್ನನ್ನು ಹಾಗೂ ಚಾಸಾ-2 ರವರನ್ನು ಚಳ್ಳಕೆರೆ ಟೌನ್ ನ ರೈಲ್ವೇ ಸ್ಟೇಷನ್ ಮುಂದಿನ ಮುಖ್ಯ ದ್ವಾರದ ಹತ್ತಿರ ಕರೆದುಕೊಂಡು ಹೋಗಿ ಗಸ್ತು ಮಾಡುತ್ತಿದ್ದರು ಎಂದರೆ ಸರಿ. ಆಗ ಒಬ್ಬ ಆಸಾಮಿ ಬೈಕಿನಲ್ಲಿ ಬರುತ್ತಿದ್ದು, ಆತನು ಸಮವಸ್ತ್ರದಲ್ಲಿದ್ದ ಅಬಕಾರಿ

ನಿರೀಕ್ಷಕರನ್ನು ನೋಡಿ ಸ್ಥಳದಲ್ಲಿ ಬೈಕನ್ನು ಬಿಟ್ಟು ಪರಾರಿಯಾಗಿರುತ್ತಾನೆ ಎಂದರೆ ಸಾಕ್ಷಿಯು ದೂರದಿಂದ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-4 ಮತ್ತು 5 ರವರು ಸದರಿ ಆಸಾಮಿಯನ್ನು ಹಿಡಿಯಲು ಪ್ರಯತ್ನಿಸಿದರು ಬೆಳಗ್ಗೆ ಮಬ್ಬು ಕತ್ತಲಿದ್ದ ಕಾರಣ ಹಿಡಿಯಲು ಆಗಿರುವುದಿಲ್ಲ ಎಂದರೆ ಸರಿ. ಸ್ಥಳದಲ್ಲಿದ್ದ ಬೈಕನು ಪರಿಶೀಲಿಸಿನೋಡಲಾಗಿ ಚೆ8 ಕನ ಸೈ} ಬ್ಯಾಗಿನಲ್ಲಿ 90 ಎಂ ಎಲ್ ನ ಹೈ ವರ್ಡ್ ವಿಸ್ಕಿಯ 48 ಮದ್ಯದ ಪೌಚ್ ಗಳು ಕಂಡು ಬಂದಿರುತ್ತವೆ ಎಂದರೆ ಸರಿಯಲ್ಲ. ಸದರಿ ಮದ್ಯದಲ್ಲಿ ರಾಸಾಯನಿಕ ಪರೀಕ್ಷೆಗಾಗಿ 26 ಮದ್ಯದ ಪೌಚ್ ಗಳನ್ನು ಬಿಳಿ ಬಟ್ಟೆ ಚೀಲಕ್ಕೆ ಹಾಕಿ ಅರಗಿನಿಂದ ಇಲಾಖಾ ಮೊಹರನ್ನು ಹಾಕಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಬೆಳಿಗ್ಗ 06-15 ರಿಂದ 07-00 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಸಿ ಮದ್ಯದ ಪೌಚ್ ಗಳನ್ನು ಜಪ್ತು ಪಡಿಸಿಕೊಳ್ಳುವಾಗ ಸ್ಥಳದಲ್ಲಿ ನಿಪಿ.1 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನ ಓಡಿ ವ್ಯಕ್ತಿ ಎಂದರೆ ಸರಿಯಲ್ಲ.

ದಿನಾಂಕಃ 02.05.2019 ರಂದು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಟಿ.ಟಿ., ಆರೋಪಿ ಪರ ವಕೀಲರಿಂದಃ</u>**

ರೈಲ್ವೇ ನಿಲ್ದಾಣದ ಹತ್ತಿರ ಯಾವ ವಿಚಾರಕ್ಕಾಗಿ ನಿಪಿ.1 ಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮದ್ಯವನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಪೊಲೀಸರು ಯಾವ ವಿಚಾರಕ್ಕಾಗಿ ನನ್ನನ್ನು ರೈಲ್ವೇ ನಿಲ್ದಾಣದ ಹತ್ತಿರ ಕರೆದುಕೊಡಯಿ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ